ಶ್ರೀ ವೀರೇಂದ್ರ ಪಾಟೀಲ್.—ಇದನ್ನು ನಾನು ಹೇಳುವುದು ಕಷ್ಟವಾಗುತ್ತದೆ. ಅವರು ಏನೇನು ರಿಪೋರ್ಟುಗಳನ್ನು ಕೊಟ್ಟಿದ್ದಾರೆ ಅವೆರ್ನಾ ಕೇಂದ್ರ ಸರಕಾರಕ್ಕೇ ಸಂಬಂಧ ಪಟ್ಟಂತಹವುಗಳು.

Mr. DEPUTY CHAIRMAN.—Sri Hiregouder may put the Question No. 137.

Kannada Pandit Examination

137. Sri V. S. HIRE GOUDAR (Local Authorities Constituency).—(On behalf of Sri Basavaraj Kattimani (Nominated).—

Will the Minister for Education be pleased to state :—

(*a*) whether it is a fact that Kannada Pandit examination is conducted once in two years ;

(*b*) if so, whether the Government has any idea of conducting this examination once in a year as in the case of other examinations to prevent the wastage of time as the failed candidates have to wait for two years to appear again for the examination ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) The matter is under consideration of the Government.

ಶ್ರೀ ವಿ. ಎಸ್. ಹಿರೇಗೌಡರ್.—ಎರಡು ವರ್ಷಕ್ಕೆ ಒಮ್ಮೆ ಪಂಡಿತ ಪರೀಕ್ಷೆ ಎಂದು ಮಾಡಿದರೆ ಇದರಿಂದ ಬಹಳ ಶಿಕ್ಷಕರಿಗೆ ತೊಂದರೆಯಾಗುತ್ತದೆ. ಇದಕ್ಕಾಗಿ ಪ್ರತಿ ವರ್ಷವೂ ನಡೆಸುವಂತೆ ಮಾಡಲು ಸರಕಾರ ಬೇಗನೆ ಏರ್ಪಾಟು ಮಾಡುತ್ತಾರೆಯೇ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದನ್ನು ಉತ್ತರದಲ್ಲೇ ಹೇಳಲಾಗಿದೆ. ಇದು ಉಪಾಧ್ಯಾಯರುಗಳ ಸಂಖ್ಯೆಯಮೇಲೆ ಅವಲಂಬಿಸಿರುತ್ತದೆ. ಸಾಕಷ್ಟು ಸಂಖ್ಯೆಯಲ್ಲಿ ಉಪಾಧ್ಯಾಯರುಗಳು ಇದ್ದರೆ ಆಗ ಪ್ರತಿ ವರ್ಷ ಪರೀಕ್ಷೆಗಳನ್ನು ನಡೆಸುವುದನ್ನು ವಿಚಾರ ಮಾಡುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡ.—ನಮ್ಮ ರಾಜ್ಯಕ್ಕೆ ಒಟ್ಟು ಇರುವ ಹೈಸ್ಕೂಲುಗಳಿಗೆ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಎಷ್ಟು ಜನ ಕನ್ನಡ ಪಂಡಿತರುಗಳು ಬೇಕಾಗುತ್ತದೆ ಮತ್ತು ವರ್ಷದಲ್ಲಿ ಎಷ್ಟು ಜನ ಪಂಡಿತರು ಪರೀಕ್ಷೆಗಳಲ್ಲಿ ಪಾಸಾಗಿ ಬರುತ್ತಾರೆ, ಇದರ ವಿವರಗಳು ಇವೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿಯೂ ಇರುವ ಹೈಸ್ಕೂಲುಗಳಲ್ಲಿ ಕನ್ನಡ ಪಂಡಿತರುಗಳಿದ್ದಾರೆ. ಇದರಲ್ಲಿ ಅಂತಹ ಕೊರತೆ ಇಲ್ಲ. ಆದರೆ ಖಾಸಗಿ ಹೈಸ್ಕೂಲುಗಳಲ್ಲಿ ಕನ್ನಡ ಪಂಡಿತರುಗಳ ಕೊರತೆ ಇದೆ. ಇದನ್ನು ನಿವಾರಿಸುವುದಕ್ಕಾಗಿ ಮೈಸೂರಿನಲ್ಲಿ ಸರಕಾರದ ಒಂದು ಟ್ರೈನಿಂಗು ಕಾಲೇಜು ಇದೆ ಮತ್ತು ಖಾಸಗಿಯವರೂ ಕೆಲವು ಕಡೆ ಇಂತಹ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ವರ್ಷದಲ್ಲಿ ಪರೀಕ್ಷೆಗಳ ಮೂಲಕ ಸುಮಾರು 40–50 ಜನರು ಕನ್ನಡ ಪಂಡಿತರು ಪಾಸಾಗಿ ಬರುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡ.—ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 200 ಪಂಡಿತರ ಕೊರತೆ ಇದೆ ಎಂದು ನನಗೆ ತಿಳಿದಿದೆ. ಇನ್ನೂ ಜಾಸ್ತಿ ಇದೆಯೋ ಎಂದು ನನಗೆ ಗೊತ್ತಿಲ್ಲ. ಇವರ ಸಂಖ್ಯೆಯನ್ನು ಜಾಸ್ತಿ ಮಾಡಬೇಕಾದರೆ ಪ್ರತಿ ವರ್ಷವೂ ಇಂತಹ ಪಂಡಿತ ಪರೀಕ್ಷೆಗಳನ್ನು ಸರಕಾರ ನಡೆಸುವುದು ಒಳ್ಳೆಯದಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಹೈಸ್ಕೂಲುಗಳಲ್ಲಿ ಬಿ. ಎ. ಜೊತೆಗೆ ಕನ್ನಡ ಮೇಜರು ತೆಗೆದುಕೊಂಡು ಪಾಸು ಮಾಡಿರುವ ಗ್ರಾಜುಯೇಟರುಗಳನ್ನು ನೇಮಕ ಮಾಡುತ್ತಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಹಾಗೂ ಕರ್ನಾಟಕ ಯೂನಿವರ್ಸಿಟಿಯಲ್ಲಿ ಕನ್ನಡ ಮೇಜರು ತೆಗೆದುಕೊಂಡು ಬಿ. ಎ. ಪಾಸು ಮಾಡಲು ಅನುಕೂಲ ಮಾಡಿದ್ದಾರೆ. ಇದರಿಂದ ಪಂಡಿತರುಗಳ ಕೊರತೆ ಅಷ್ಟು ಇದೆ ಎಂದು ನಮಗೆ ಕಾಣುತ್ತಲಿಲ್ಲ.

ಶ್ರೀ ವಿ. ವೆಂಕಟಪ್ಪ.—ಕನ್ನಡ ಪಂಡಿತರನ್ನಾಗಿ ಬಿ.ಎ. ಕನ್ನಡ ಪಾಸು ಮಾಡಿರುವವರನ್ನು ನೇಮಕ ಮಾಡುತ್ತಿರುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಬಿ.ಎ. ಮೇಜರಾಗಿ ತೆಗೆದುಕೊಂಡು ಪಾಸು ಮಾಡಿರುವವರನ್ನು ಪಂಡಿತನ್ನಾಗಿ ನೇಮಕ ಮಾಡುತ್ತಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಇವರನ್ನು ಪಂಡಿತರನ್ನಾಗಿ ಮಾಡಿದರೆ ಇವರಿಗೆ ಇರುವ ಸ್ಥಾನಮಾನ ಏನು ಎನ್ನುವುದನ್ನು ಪರಿಗಣನೆ ಮಾಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎಸ್. ಎಸ್. ಎಲ್. ಸಿ. ಮಾಡಿಕೊಂಡು ನಂತರ ಪಂಡಿತ ಪರೀಕ್ಷೆ ಮಾಡಿಕೊಳ್ಳುತ್ತಾರೆ. ಕೆಲವರು ಬಿ. ಎ. ಪಾಸು ಮಾಡುವಾಗ ಕನ್ನಡ ಮೇಜರಾಗಿ ತೆಗೆದುಕೊಂಡು ಪಾಸು ಮಾಡಿ ಬಂದವರನ್ನು ಹೈಸ್ಕೂಲುಗಳಲ್ಲಿ ಕನ್ನಡ ಪಂಡಿತ ಪರೀಕ್ಷೆ ಪಾಸು ಮಾಡಿಕೊಂಡು ಬರುತ್ತಾರೆ. ಇವರನ್ನು ಹೈಸ್ಕೂಲುಗಳಲ್ಲಿ ಗ್ರಾಜುಯೇಟು ಟೀಚರುಗಳಾಗಿ ನೇಮಕ ಮಾಡುತ್ತಾರೆ.

ಶ್ರೀ ವಿ. ವೆಂಕಟಪ್ಪ.—ಪಂಡಿತರಾಗಿ ಬರಲು ಬಿ.ಎ. ಪಾಸು ಮಾಡಿದವರನ್ನೇ ಸರಕಾರ ಪ್ರೋತ್ಸಾಹ ಮಾಡಿ ಅವರನ್ನು ನೇಮಿಸಬೇಕು ಎಂದು ಮಾಡಿರುವುದು ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಮಾನ್ಯವಾಗಿ ಕೆಲವು ಕಡೆ ಬಿ.ಎ. ಪಾಸಾದವರನ್ನೇ ನೇಮಕ ಮಾಡಿದರೂ ತಾತ್ಕಾಲಿಕವಾಗಿ ಕೆಲವು ಕಡೆ ಸ್ಕೂಲುಗಳಲ್ಲಿ ಇತರ ಪಂಡಿತರನ್ನೂ ನೇಮಕ ಮಾಡುತ್ತಾರೆ. ಇದನ್ನು ಇನ್ನೂ ಕೆಲವು ಕಾಲ ನೋಡಿ ಆ ನಂತರ ಪರಿಶೀಲನೆ ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಸ್ವಾಮಿ, ಕೆಲಸಕ್ಕೆ ತೆಗೆದುಕೊಳ್ಳುವಾಗ ಕನ್ನಡ ಪಂಡಿತರುಗಳಿಗೆ ಹೆಚ್ಚಿಗೆ ಅವಕಾಶ ಕೊಡದೆ ಕನ್ನಡ ಮೇಜರ್ ಆಗಿ ತೆಗೆದುಕೊಂಡು ಬಿ.ಎ. ಮಾಡಿಕೊಂಡಿರುವವರಿಗೆ ಹೆಚ್ಚಿಗೆ ಪ್ರಾಶಸ್ತ್ಯ ಕೊಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಮಾನ್ಯವಾಗಿ ಕನ್ನಡ ಪಂಡಿತರು ಮತ್ತು ಕನ್ನಡ ಮೇಜರ್ ಆಗಿ ತೆಗೆದುಕೊಂಡು ಬಿ.ಎ. ಆಗಿರುವವರು ಇಬ್ಬರೂ ಕೆಲಸಕ್ಕೆ ಅರ್ಜಿ ಹಾಕಿದಾಗ ಬಿ. ಎ. ಕನ್ನಡ ಮಾಡಿಕೊಂಡಿರುವವರಿಗೆ ಫ್ರಾಫರ್‌ನ್ಸ್ ಕೊಡುತ್ತೇವೆ.

ಶ್ರೀ ಎಂ. ಜಿ. ಹಂದ್ರಾಳ್.—ಸ್ವಾಮಿ, ಕನ್ನಡದಲ್ಲಿ ಜ್ಞಾನ ಪರೀಕ್ಷೆಯನ್ನು ಪಾಸು ಮಾಡಿದಂಥವರು ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರುಗಳಾಗಿದ್ದಾರೆ. 1961 ರ ಹಿಂದೆ ಕನ್ನಡ ಜ್ಞಾನ ಪರೀಕ್ಷೆಯನ್ನು ಎಸ್. ಎಸ್. ಎಲ್. ಸಿ. ಗೆ ಸಮಾನವೆಂದು ಪರಿಗಣಿಸಲಾಗಿತ್ತು. ಅದೇ ರೀತಿ 1962 ರಲ್ಲೂ ಕನ್ನಡ ಜ್ಞಾನ ಪರೀಕ್ಷೆ ಪಾಸುಮಾಡಿಕೊಂಡಿರುವವರು ಇದೇ ಸವಲತ್ತು ಕೇಳಿದರೆ ಸರ್ಕಾರ ಪರಿಶೀಲಿಸುವುದೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಕಾರಣ ಈಗ ಕನ್ನಡದ ಜ್ಞಾನ ಪರೀಕ್ಷೆ ಎಸ್. ಎಸ್. ಎಲ್. ಸಿ. ಗೆ ಸಮಾನವಲ್ಲ. 1962 ರ ಪೂರ್ವದಲ್ಲಿ ಕನ್ನಡ ಪಂಡಿತರ ಕೊರತೆ ಇದ್ದುದರಿಂದ ಪ್ರೈಮರಿ ಶಾಲೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿರುವುದರಿಂದ ಕನ್ನಡದ ಜ್ಞಾನ ಪರೀಕ್ಷೆ ಪಾಸು ಆಗಿರುವವರನ್ನು ಎಸ್. ಎಸ್. ಎಲ್ ಸಿ. ಗೆ ಸಮಾನವೆಂದು ಪರಿಗಣನೆ ಮಾಡಲಾಗಿತ್ತು. ಅದರಂತೆ ಕನ್ನಡ ಟೀಚರ್ಸ್ ಆಗಿ ಅಪಾಯಿಂಟ್ ಮಾಡುತ್ತಿದ್ದರು. ಈಗ 1961ರಿಂದ ಈ ರೀತಿ ಮಾಡಬಾರದು ಎಂದು ಸರ್ಕಾರದ ಹುಕುಂ ಮಾಡಿದೆ. ಈ ರೂಲು ಪ್ರಕಾರ ಈಗ ಆಗುವುದಿಲ್ಲ.

ಶ್ರೀ ಎಸ್. ಪಿ. ರಾಜಣ್ಣ.—ಕನ್ನಡ ಪಂಡಿತ ಪರೀಕ್ಷೆ ಮತ್ತು ಮುನ್ಸಿ ಪರೀಕ್ಷೆಗಳನ್ನು ಎರಡು ವರ್ಷಕ್ಕೊಮ್ಮೆ ನಡೆಸುತ್ತಿದ್ದಾರೆ. ಇದು ಎಷ್ಟು ಸೆಂಟರುಗಳಲ್ಲಿ ನಡೆಯುತ್ತಾ ಇದೆ ಎನ್ನುವುದು ಗೊತ್ತಿದೆಯೇ ಮತ್ತು ಅದಕ್ಕೆ ಹೆಚ್ಚು ಹುದುಗರು ಕೂತುಕೊಳ್ಳುತ್ತಿದ್ದಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸ್ವಾಮಿ, ಹಿಂದೆ ಕನ್ನಡವನ್ನು ಹೇಳಿಕೊಡುವುದಕ್ಕೆ ಕನ್ನಡ ಪಂಡಿತರುಗಳನ್ನು ನೇಮಕ ಮಾಡುತ್ತಿದ್ದರು. ಈಗ ಕನ್ನಡ ಪಂಡಿತರು ಇಲ್ಲದೇ ಇದ್ದರೂ ಪಾಠ ಹೇಳಿಕೊಟ್ಟರೆ ಸಾಕು ಅಲ್ಲವೇ ? ಇದಕ್ಕೆ ಸರ್ಕಾರದ ಧೋರಣೆ ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹಾಗೇನೂ ಇಲ್ಲ. ಅವರಿಗೆ ಯಾವ ಯಾವ ಕ್ವಾಲಿಫಿಕೇಷನ್ ಇರಬೇಕೋ ಅದು ಇದ್ದರೆ ಅವರು ಟೀಚ್ ಮಾಡುವುದಕ್ಕೆ ಅರ್ಹರಾಗಿರುತ್ತಾರೆ.

ಶ್ರೀ ಎಸ್. ಪಿ. ರಾಜಣ್ಣ.—ಕನ್ನಡ ಜಾಣ ಪರೀಕ್ಷೆ ಎಷ್ಟು ಸೆಂಟರುಗಳಲ್ಲಿ ನಡೆಯುತ್ತಾ ಇದೆ ಸ್ವಾಮಿ ?

Sri N. M. KOTRABASAIAH SOGI.—I want notice.

ಶ್ರೀ ವಿ. ಎಸ್. ಹಿರೇಗೌಡರ್.—ಸ್ವಾಮಿ, ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಅಂದರ್ ಕನ್ಸಿಡರೇಷನ್ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳಲ್ಲಿ ನಿವೇದನೆ ಮಾಡಿ ಕೊಳ್ಳುವುದು ಏನೆಂದರೆ ಕನ್ಸಿಡರೇಷನ್ ಎನ್ನುವುದಕ್ಕೆ ಒಂದು ಇತಿ ಮಿತಿ ಹಾಕಿ ಒಂದು ದಿವಸ ದಲ್ಲೋ ಅಥವಾ ಎರಡು ದಿವಸದಲ್ಲೋ ಆಗುವಂತೆ ಮಾಡುತ್ತೀರಾ ? ಅಥವಾ ನಮಗೆ ಸಮಾಧಾನವಾಗಲಿ ಎಂದು ಉತ್ತರ ಕೊಡುತ್ತಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಯಾವುದಾದರೂ ಕಾಯಿದೆ ಕಾನೂನುಗಳನ್ನು ಮಾಡುವಾಗ ಸರ್ಕಾರದ ಆಡಳಿತದ ಇತಿಮಿತಿಗಳನ್ನೂ ಪರಿಶೀಲಿಸಿ, ಇದು ಸರ್ವದೃಷ್ಟಿಯಿಂದ ಯೋಗ್ಯವಾದದು ಎಂದು ಕಂಡುಬಂದರೆ ಅದಕ್ಕೆ ಒಪ್ಪಿಗೆ ಕೊಡುತ್ತಾರೆ.

Mr. DEPUTY CHAIRMAN.—Sri M. G. Handral may put question No. 143.

Increments to untrained Primary School Teachers

143. Sri M. G. HANDRAL (Teachers' Constituency) [on behalf of SRI BASAVARAJ KATTIMANI (Nominated)].—

Will the Minister for Education be pleased to state :—

(*a*) whether it is a fact that the increments of untrained primary school teachers were withheld from 23rd June 1961 ;

(*b*) whether it is a fact that the Government have issued an order in july 1969 revising the same to grant increments even to the untrained primary school teachers ;

(*c*) whether it has been mentioned in the said order that the arrears of increment for the period from 1961 to 1969 will not be paid ;

(*d*) whether it has come to the notice of the Government that by the said order there is a loss of Rs. 2,000 to 3,000 to each of the untrained teachers ;

(*e*) whether the Government consider sympathetically the question of granting increments to them from 1961 up-to-date and thereby prevent the said loss to the poor primary school Teachers ?